Cn-1 conversion

ಕಂದಾಯ ಇಲಾಖೆ

ನಂ.ಎಎಲ್‌ಎನ್( ಎಂಜಿ )ಸಿಆರ್/ 41 /06-07

ಜಿಲ್ಲಾಧಿಕಾರಿಯವರ ಕಛೇರಿ,
ತುಮಕೂರು ಜಿಲ್ಲೆ,
ತುಮಕೂರು, ದಿನಾಂಕ 12-03-2008.

ಅನುಬಂಧ-10

## ತಿದ್ದುಪಡಿ ಅಧಿಕೃತ ಜ್ಞಾಪನ

ವಿಷಯ : ತುಮಕೂರು ಜಿಲ್ಲೆ ಸಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಸೀಬಿಅಗ್ರಹಾರ ಗ್ರಾಮದ ಸ.ನಂ.38 ರಲ್ಲಿ ಒಟ್ಟು 3-36ಎ/ ಗುಂಟೆ ಸ.ನಂ. 39/2 ರಲ್ಲಿ 10-06 ಎಕರೆ/ಗುಂಟೆ, ಸ.ನಂ. 41/1 ರಲ್ಲಿ 17-36 ಎಕರೆ/ಗುಂಟೆ ವಿಸ್ತೀರ್ಣವನ್ನು ವ್ಯವಸಾಯೇತರ ವಾಣಿಜ್ಯ ( ರೆಸಾರ್ಟ್ ) ಉದ್ದೇಶಕ್ಕಾಗಿ ಭೂಪರಿವರ್ತಿಸಿರುವ ವಿಸ್ತೀರ್ಣವನ್ನು ವಾಸದ ಉದ್ದೇಶಕ್ಕಾಗಿ ಶ್ರೀ. ವೈ. ರಾಜೀವ ರೆಡ್ಡಿ ಬಿನ್ ಚಿನ್ನಪ್ಪ ರೆಡ್ಡಿ, ಬೆಂಗಳೂರು ಇವರಿಗೆ " ವಾಣಿಜ್ಯ ಉದ್ದೇಶಕ್ಕಾಗಿ" ಭೂಪರಿವರ್ತನೆಗೆ ಆದೇಶಿಸಿದ್ದನ್ನು ಮಾರ್ಪಡಿಸಿ "ವಾಸದ ಉದ್ದೇಶಕ್ಕಾಗಿ" ಅನುಮತಿಸುವ ಕುರಿತು.

ಉಲ್ಲೇಖ : 1. ಈ ಕಾರ್ಯಾಲಯದ ಇದೇ ಕ್ರಮಾಂಕದ ಅಧಿಕೃತ ಜ್ಞಾಪನ ಪತ್ರದ ದಿನಾಂಕ 23.07.2007.

2. ಶ್ರೀ. ವೈ. ರಾಜೀವ ರೆಡ್ಡಿ ಬಿನ್ ಚಿನ್ನಪ್ಪರೆಡ್ಡಿ, ಬೆಂಗಳೂರು ಇವರು ಸಲ್ಲಿಸಿರುವ ಮನವಿ ದಿನಾಂಕ 12.11.2007.

3. ಸರ್ಕಾರದ ಸುತ್ತೋಲೆ ನಂ. ಆರ್‌ಡಿ 13 ಎಲ್‌ಜಿಪಿ 2005 ಬೆಂಗಳೂರು ದಿನಾಂಕ 02.07.2005.

4. ಏಕಗವಾಕ್ಷಿ ಸಮಿತಿಯ ನಡವಳಿಕೆ ದಿನಾಂಕ 11.02.2008.

<>OOO<>

ಶ್ರೀ. ರಾಜೀವ ರೆಡ್ಡಿ ಬಿನ್ ಚಿನ್ನಪ್ಪ ರೆಡ್ಡಿ ಇವರ ಹೆಸರಿಗೆ ಸಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಸೀಬಿ ಅಗ್ರಹಾರ ಗ್ರಾಮದ ಸ.ನಂ. 38 ರಲ್ಲಿ 3-36 ಎ/ಗುಂಟೆ, ಸ.ನಂ.39/2 ರಲ್ಲಿ 10-06 ಎ/ಗುಂಟೆ, ಸ.ನಂ. 41/1 ರಲ್ಲಿ 17-36 ಎಕರೆ/ಗುಂಟೆ ಜುಂಲಾ 31 ಎಕರೆ 38 ಗುಂಟೆ ವಿಸ್ತೀರ್ಣದ ಜಮೀನನ್ನು ಉಲ್ಲೇಖ (1)ರಲ್ಲಿ ಕಾಣಿಸಿರುವ ಅಧಿಕೃತ ಜ್ಞಾಪನದ ರೀತ್ಯಾ ವ್ಯವಸಾಯೇತರ ಉದ್ದೇಶಕ್ಕಾಗಿ ( ರೆಸಾರ್ಟ್) ಭೂಪರಿವರ್ತನೆಗೆ ಆದೇಶಿಸಲಾಗಿತ್ತು.

ಸದರಿ ಅರ್ಜಿದಾರರು ದಿನಾಂಕ 12.11.2007 ರಂದು ಈ ಕಛೇರಿಗೆ ಮನವಿ ಸಲ್ಲಿಸಿ ಮೇಲೆ ವಿವರಿಸಿರುವಂತೆ ವಾಣಿಜ್ಯ ಉದ್ದೇಶಕ್ಕಾಗಿ ಭೂಪರಿವರ್ತಿಸಿರುವುದನ್ನು ಮಾರ್ಪಡಿಸಿ ವಾಸದ ಉದ್ದೇಶಕ್ಕಾಗಿ ಅನುಮತಿಸುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಅರ್ಜಿದಾರರ ಮನವಿ ಬಗ್ಗೆ ಪರಿಶೀಲಿಸಿ ವಾಸದ ಉಪಯೋಗಕ್ಕಾಗಿ ಅನುಮತಿಸುವ ಬಗ್ಗೆ ನಗರ ಯೋಜನಾ ಸಹಾಯಕ ನಿರ್ದೇಶಕರು, ತುಮಕೂರು, ಕಾರ್ಯದರ್ಶಿ, ಶೀಬಿ ಅಗ್ರಹಾರ ಗ್ರಾಮ ಪಂಚಾಯ್ತಿ, ಜಿಲ್ಲಾ ಆರೋಗ್ಯ ಅಧಿಕಾರಿಗಳು, ತುಮಕೂರು ಮತ್ತು ಉಪ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ

02)

03)

ನಿಯಂತ್ರಣ ಮಂಡಳಿ ತುಮಕೂರು ಇವರಿಂದ ಅಭಿಪ್ರಾಯದ ವರದಿಯನ್ನು ಕೋರಲಾಗಿದ್ದು, ಈ ಮೇಲ್ಕಂಡ ಅಧಿಕಾರಿಗಳವರಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಪರಿಶೀಲಿಸಲಾಗಿದೆ. ಹಾಗೂ ಅರ್ಜಿದಾರರು ಈಗಾಗಲೇ ದಿನಾಂಕ 21.05.2007 ರಂದು ಚಲನ್ ನಂ. 8ರಲ್ಲಿ 6,96,036-00 ರೂ. ಹಣವನ್ನು ಸರ್ಕಾರಕ್ಕೆ ಜಮಾ ಮಾಡಿರುತ್ತಾರೆ.

ಸದರಿಯವರ ಕೋರಿಕೆಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 97 ರ ಮತ್ತು ಅದರಡಿ ಉಪಬಂಧಗಳನ್ನು ಓದಲಾದ ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆ/ ಕಾರ್ಪೋರೇಷನ್ ಕಾಯ್ದೆ/ ಪಂಚಾಯತಿ ಕಾಯ್ದೆಯಲ್ಲಿನ ಹಾಗೂ ಕರ್ನಾಟಕ ಕಂಟ್ರಿ ಟೌನ್ ಪ್ಲಾನಿಂಗ್ ಕಾಯ್ದೆಯಲ್ಲಿನ ಅವಕಾಶಗಳನ್ನು ಅನುಸರಿಸಿ ಪರಿಶೀಲಿಸಲಾಗಿದೆ. ಅರ್ಜಿದಾರರು ಲಭ್ಯಪಡಿಸಿದ ಅಗತ್ಯ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ ಸಂಬಂಧಿತ ಕಾಯ್ದೆ ನಿಯಮಗಳಲ್ಲಿನ ಎಲ್ಲ ಸಂಬಂಧಿತ ಷರತ್ತುಗಳನ್ನು ಪೂರೈಸಿರುವ ಬಗ್ಗೆ ದಿನಾಂಕ 11.02.2008 ರಂದು ನಡೆದ ಸಭೆಯಲ್ಲಿ ಏಕಗವಾಕ್ಷಿ ಸಮಿತಿಯವರು ಮೇಲ್ಕಂಡ ಕಾಯ್ದೆ ಮತ್ತು ನಿಯಮಗಳಲ್ಲಿನ ಷರತ್ತುಗಳನ್ನು ಪಾಲಿಸುವ ಬಗ್ಗೆ ಮನದಟ್ಟು ಮಾಡಿಕೊಂಡಿರುವರು.

ಅರ್ಜಿದಾರರು ಪ್ರಾಧಿಕೃತ ಅಧಿಕಾರಿಯವರಿಂದ ದಿನಾಂಕ 25.01.2008 ರ ಪತ್ರದ ರೀತ್ಯಾ ಕೆಲವು ನಿಬಂಧನೆಗೊಳಪಟ್ಟು ವಾಣಿಜ್ಯ ಉದ್ದೇಶದಿಂದ ವಾಸದ ಉದ್ದೇಶಕ್ಕೆ ಭೂಪರಿವರ್ತಿಸುವ ಬಗ್ಗೆ ನಿರಾಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಏಕಗವಾಕ್ಷಿ ಸಮಿತಿಯು ಅರ್ಜಿದಾರರು ಅಗತ್ಯ ಕ್ರಮ ಕೈಗೊಂಡಿರುವ ಬಗ್ಗೆ ತೃಪ್ತಿ ಹೊಂದಿದ್ದು, ಶ್ರೀ ವೈ ರಾಜ[illegible] ರೆಡ್ಡಿ ಬಿನ್ ಚಿನ್ನಪ್ಪ ರೆಡ್ಡಿ, ಬೆಂಗಳೂರು ಇವರಿಗೆ ಸಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಸೀಬಿ ಅರ[illegible] ಗ್ರಾಮದ ಸರ್ವೆ ನಂ. 38 ರಲ್ಲಿ 3-36 ಎಕರೆ/ ಗುಂಟೆ , ಸ.ನಂ. 39/2 ರಲ್ಲಿ 10-06 ಎಕರೆ/ಗಂಟೆ, ಸ.ನಂ. 41/1 ರಲ್ಲಿ 17-36 ಎಕರೆಗುಂಟೆ ಜುಂಲಾ 31ಎಕರೆ 38 ಗುಂಟೆ ವಿಸೀರ್ಣವನ್ನು ವಾಣಿಜ್ಯ ಉದ್ದೇಶಕ್ಕಾಗಿ ಉಲ್ಲೇಖ (1)ರ ಅಧಿಕೃತ ಜ್ಞಾಪನದಂತೆ ಭೂಪರಿವರ್ತಿಸಿರುವುದನ್ನು ಮಾರ್ಪಡಿಸಿ ವಾಸದ ಉದ್ದೇಶಕ್ಕೆ ಉಪಯೋಗಿಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಲಾಗಿದೆ.

01. ವಾಣಿಜ್ಯ ಉದ್ದೇಶದಿಂದ ಬದಲಾಯಿಸಿರುವ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿ ಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
02. ಪ್ರಸ್ತಾಪಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ನಗರ ಯೋಜನಾ ಇಲಾಖೆಯಿಂದ ವಸತಿ ವಿನ್ಯಾಸ ಅನುಮೋದನೆ ಪಡೆಯತಕ್ಕದ್ದು.
03. ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ನಗರ ಯೋಜನಾ ಸಹಾಯಕ ನಿರ್ದೇಶಕರು, ತುಮಕೂರುರವರಿಂದ ಅನುಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪಡೆದು ಅದರ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.
04. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರಿಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ, ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿದ ನಂತರವೇ ನಿವೇಶನಗಳ ಹಂಚಿಕೆ / ಪರಭಾರೆ ಮಾಡತಕ್ಕದ್ದು.
05. ಈ ಜಮೀನಿಗೆ ತಾಕು ಫೂಟ್ ಖರಾಬ್ ಜಮೀನು ಇದ್ದಲ್ಲಿ, ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸ.ನಂ.....-...... ರಲ್ಲಿನ " ಎ" ಖರಾಬ್ ವಿಸ್ತೀರ್ಣ............-........... ಕ್ಕೆ ಮಾರುಕಟ್ಟೆ ದರ ಮತ್ತು ಭೂ ಪರಿವರ್ತನೆ ಶುಲ್ಕ ರೂ............-...........ಪಾವತಿಸಿಕೊಳ್ಳಲಾಗಿದ್ದು,............-............. ಉದ್ದೇಶಕ್ಕಾಗಿ ಬಳಸಲು ಭೂಪರಿವರ್ತನೆ ನೀಡಿದೆ. ಹಾಗೂ ಸ.ನಂ. 39/2 ರಲ್ಲಿ 0-13ಗುಂಟೆ ಸ.ನಂ. 41/1 ರಲ್ಲಿ 1-19 ಎಕರೆ ಒಟ್ಟು 1-32 ಎಕರೆ ವಿಸ್ತೀರ್ಣ "ಬಿ" ಖರಾಬಿನಲ್ಲಿ ಬರುವ ಕಾರಣ ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ " ಬಿ " ಖರಾಬಿನ 1-32 ಎ/ಗುಂಟೆ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರ್ ರವರು ಈ ಬಾಬ್ತು ಆರ್.ಟಿ.ಸಿ ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

03)

06. ಲೋಕೋಪಯೋಗಿ ಇಲಾಖೆಯವರು ಶಾಸನಾತ್ಮಕವಾಗಿ ನಿರ್ಧರಿಸಿರುವಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದ ರಸ್ತೆಯ ಮಧ್ಯಭಾಗದಿಂದ ನಿಗದಿಪಡಿಸಿದ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ ನಿಗದಿಪಡಿಸಿದ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

07. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ, ಅನಿಲ ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ : ಪರಿಸರ ಇಲಾಖೆಗಳ ಅನುಮತಿ ಪಡೆದಿರುವ ರೀತ್ಯಾ ಅಥವ ಷರತ್ತುಗಳನ್ನು ಪೂರೈಸಿದ ನಂತರವೇ ಉಪಯೋಗಿಸಿಕೊಳ್ಳತಕ್ಕದ್ದು.

08. ಸದರಿ ಬಡಾವಣೆಗೆ ಹೋಗಲು ಸಂಪರ್ಕ ರಸ್ತೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿರುವ ರೀತಿಯೇ ನಿರ್ಮಿಸತಕ್ಕದ್ದು.

09. ಬಡಾವಣೆಯೊಳಗೆ ಆಂತರಿಕ ರಸ್ತೆಗಳನ್ನು ಅಗಲಕ್ಕೆ ಅನುಗುಣವಾಗಿ ಏಕಗವಾಕ್ಷಿ ಸಮಿತಿಯಲ್ಲಿ ಪ್ರಾಧಿಕೃತ ಇಲಾಖೆಯವರು ಅನುಮೋದನೆ ಪಡೆದ ನಂತರ ಮಾತ್ರ ನಿರ್ಮಿಸತಕ್ಕದ್ದು.

10. ಸಾರ್ವಜನಿಕ ಉಪಯೋಗಕ್ಕಾಗಿ ನಿಗದಿಪಡಿಸಲ್ಪಟ್ಟ ಈ ಕೆಳಗಿನ ನಿವೇಶನಗಳನ್ನು ಸಂಬಂಧಿತ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೋಂದಾವಣೆ ಮಾಡಿಸಿಕೊಡತಕ್ಕದ್ದು. ಮತ್ತು ಏಕನಿವೇಶನವನ್ನು ವಿಭಜಿಸಲು ಉದ್ದೇಶಿಸಿದಲ್ಲಿ ಅರ್ಜಿದಾರರು ಜಿಲ್ಲಾಧಿಕಾರಿಗಳ ಅನುಮತಿ ಪಡೆಯುವ ಷರತ್ತು ವಿಧಿಸಿದೆ.

| ನಿವೇಶನಗಳ ಸಂಖ್ಯೆ | ಉದ್ದೇಶ | ಉದ್ದ X ಅಗಲ |
|---|---|---|
| - | - | - |
| - | - | - |
| - | - | - |

11. ಬಡಾವಣೆಯ ನಕ್ಷೆಯಲ್ಲಿ ಅನುಮೋದನೆಗೊಂಡ ವಿವಿಧ ಗಾತ್ರದ ಒಟ್ಟು ನಿವೇಶನಗಳು ಈ ಕೆಳಕಂಡಂತಿವೆ.

| ನಿವೇಶನದ ಗಾತ್ರ | | ಸಂಖ್ಯೆ |
|---|---|---|
| | - | - |
| | - | - |

ಒಟ್ಟು ನಿವೇಶನಗಳು:

12. ಬಡಾವಣೆ ರೂಪ ರೇಷೆಗೆ ಮತ್ತು ನಕ್ಷೆಗೆ ಅನುಮೋದನೆ ನೀಡುವ ಪ್ರಾಧಿಕಾರವು ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳು ಪ್ರಾಧಿಕೃತ ನಿಯಮಗಳಿಗೆ ಅನುಗುಣವಾಗಿ ಇರುವ ಬಗ್ಗೆ ಮತ್ತು ಭೌತಿಕವಾಗಿ ಬಡಾವಣೆ ರಚನೆಯಾಗಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಗಳಂತೆ ಮಾರಾಟಕ್ಕೆ ನಿವೇಶನಗಳನ್ನು ಸದರಿ ಪ್ರಾಧಿಕಾರವು ಬಿಡುಗಡೆ ಪತ್ರ / ಅನುಮತಿ ಪತ್ರ ನೀಡತಕ್ಕದ್ದು. ಅನುಮತಿ ಪತ್ರವಿಲ್ಲದೆ ನಿವೇಶನ ಪರಭಾರೆ ನಿಷೇಧಿಸಿದೆ.

04)

13 ಭೂ ಪರಿವರ್ತನಾ ಪತ್ರ, ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆಯುವ ಬಡಾವಣೆ ಅನುಮೋದನೆ ಪತ್ರ, ಅನುಮೋದಿತ ಬಡಾವಣೆ ನಕ್ಷೆ ಹಾಗೂ ಬಡಾವಣೆಯಲ್ಲಿ ಮೂಲಭೂತ ಸೌಕರ್ಯ ಶಾಸನಾತ್ಮಕಾವಾಗಿ ರಚನೆಯಾದ ಬಗ್ಗೆ ನೀಡಿದ ಪತ್ರಗಳನ್ನು ಹಾಜರುಪಡಿಸಿ ನಿವೇಶನಗಳನ್ನು ನೋಂದಾವಣೆ ಮಾಡಿಸಿಕೊಳ್ಳತಕ್ಕದ್ದು.

14 ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 96ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲು ಮಾಡಲಾಗುವುದು.

## ಷೆಡ್ಯೂಲ್ ವಿವರ

ತುಮಕೂರು ಜಿಲ್ಲೆ ಸಿರಾ ತಾಲೂಕು ಕಳ್ಳಂಬೆಳ್ಳ ಹೋಬಳಿ ಸೀಬಿ ಅಗ್ರಹಾರ ಗ್ರಾಮದ ಸ.ನಂ. 38 ರಲ್ಲಿ 3-36 ಎ/ಗುಂಟೆ, 39/2ರಲ್ಲಿ 10-06 ಎಕರೆ/ಗುಂಟೆ, 41/1 ರಲ್ಲಿ 17-36 ಎಕರೆ/ಗುಂಟೆ ಒಟ್ಟು 31 ಎಕರೆ 38 ಗುಂಟೆ ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿನ ಚಕ್ಕುಬಂದಿಃ

| | |
|---|---|
| ಪೂರ್ವಕ್ಕೆ ಃ | ಸ.ನಂ.41/2 |
| ಪಶ್ಚಿಮಕ್ಕೆ ಃ | ಸ ನಂ. 36 ಮತ್ತು ರಸ್ತೆ |
| ಉತ್ತರಕ್ಕೆ ಃ | ಹಳ್ಳ |
| ದಕ್ಷಿಣಕ್ಕೆ ಃ | ಸ.ನಂ. 36 ಮತ್ತು 40 |

ಸಹಿ.
ಜಿಲ್ಲಾಧಿಕಾರಿ,
ತುಮಕೂರು ಜಿಲ್ಲೆ.

ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ ಃ

01. ತಹಶೀಲ್ದಾರ್, ಸಿರಾ ತಾಲೂಕು ರವರಿಗೆ ಮೂಲ ನಕ್ಷೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರು ವಾಸದ ಉದ್ದೇಶಕ್ಕೆ ಭೂಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್‌ಟಿಸಿಯಲ್ಲಿ ತಿದ್ದುಪಡಿಸತಕ್ಕದ್ದು ಮತ್ತು ಈ ಜಮೀನಿನ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
02. ಕಾರ್ಯನಿರ್ವಾಹಕ ಅಧಿಕಾರಿಗಳು, ಸೀಬಿ ಅಗ್ರಹಾರ ಗ್ರಾಮ ಪಂಚಾಯತಿ, ಸಿರಾ ತಾಲೂಕು ಇವರಿಗೆ ( ಪ್ರಾಧಿಕಾರ/ ಮಹಾನಗರಪಾಲಿಕೆ/ ಪುರಸಭೆ/ ನಗರಸಭೆ/ ಗ್ರಾಮ ಪಂಚಾಯತಿ ).
03. ಅರ್ಜಿದಾರರಾದ ಶ್ರೀ. ವೈ. ರಾಜೀವ ರೆಡ್ಡಿ ಬಿನ್ ಚಿನ್ನಪ್ಪ ರೆಡ್ಡಿ, ನಂ. 478, ಮೊದಲನೆ ಮುಖ್ಯ ರಸ್ತೆ ಮೊದಲನೆ ಹಂತ, ಇಂದಿರಾ ನಗರ, ಬೆಂಗಳೂರು 560 038 ರವರಿಗೆ ದೃಢೀಕೃತ ಅಂಚೆ ಮೂಲಕ ರವಾನಿಸಿದೆ.
04. ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳ ಪರವಾಗಿ,
ತುಮಕೂರು ಜಿಲ್ಲೆ
ಜಿಲ್ಲಾಧಿಕಾರಿಗಳ ಪರವಾಗಿ,
ತುಮಕೂರು ಜಿಲ್ಲೆ.